ಅಂಬೆಯ ಪಾತ್ರ ಮಾಡಿ ಮಾಧವನ ಎದುರು ಬಂದಾಗ ಅವನ ದೊಂಡೆಯ ಪಸೆ ಎಲ್ಲ ಆರಿ ಹೋಗಿತ್ತು. 'ಉರಗವೇಣಿಯರೆಲ್ಲ ಕೇಳಿರಿ' ಎನ್ನುವ ಗೆಳತಿಯರನ್ನೆಲ್ಲ ಕೂಡಿಕೊಂಡು ಅಂಬೆ ಜಲಕೇಳಿಗೆ ಹೋಗುವ ಪದ್ಯವನ್ನು ಭಾಗವತರು ಹಲವು ಆವರ್ತನದಲ್ಲಿ ಹಾಡಿದರು. ಅವಳು ಸಾ ಬಿಡ್ಳಿಲ್ಲ. ಕುಣೀತಾನೇ ಹೋದ್ಲು. ಸುಮಾರು ಇಪ್ಪತ್ತು ಮಿನಿಟು ಕುಣಿದು ಮುಗಿಸಿದಾಗ ಜನ ಎಲ್ಲ ಮರ್ಲ್ ಆಗಿ ಹೋದ್ರು. ವಿಸಿಲೋ ವಿಸಿಲ್. ಚಪ್ಪಾಳೆಯೋ ಚಪ್ಪಾಳೆ. ರಾತ್ರಿ ಬೆಳಗಾಗೂದ್ರೊಳಗೆ ಅವಳು ಮೇಳದ ಮೈನ್ ಎಟ್ರಾಕ್ಷನ್ ಆದ್ಲು.

ಆ ವರ್ಷ ಎಲ್ಲ ಕಡೆ ಸಮಗ್ರ ಭೀಷ್ಮ ಪ್ರಸಂಗವೇ. ಇವಳ ಅಂಬೆಯೇ. ಯೆಜಮಾನರಿಗೆ ಕಂಡಾಬಟ್ಟೆ ಖುಷಿ. ಒಳ್ಳೆ ಕಲೆಕ್ಷನ್. ಒಂದು ಕಡೆ ಆಟದಲ್ಲಿ ಅಂಬೆಯನ್ನು ಅರಂಟೆ(ತಬ್ಬಿ) ಹಿಡ್ಕೊಳ್ಳುವ ಸೀನಿನಲ್ಲಿ ಮಾಧವ ಅವಳನ್ನು ಗಟ್ಟಿ ಅರಂಟೆಯೇ ಬಿಟ್ಟ! ಅವನ ಮಂಡೆ ಆಮೇಲೆ ಬಿಂಗ್ರಿ ಬಿಂಗ್ರಿ ಆಯ್ತು. ಪ್ರಾಯ ನಲ್ವತ್ತರ ಹತ್ತಿರ ಬಂದಿದ್ರೂ ಅವ ಆಟದಲ್ಲಿ ಇರುವವ ಎನ್ನುವ ಕಾರಣಕ್ಕೆ ಯಾರು ಸಾ ಅವನಿಗೆ ಹುಡುಗಿ ಕೊಟ್ಟಿರಲಿಲ್ಲ. ಹೀಗಾಗಿ ಅವ ಆ ವರ್ಷದ ತಿರುಗಾಟ ಮುಗೀಲಿಕ್ಕೆ ಆಗುವಾಗ ಶಂಕರನ ಹತ್ರ 'ನಾನು ದಿವ್ಯಳನ್ನು ಮದುವೆ ಆಗ್ತೇನೆ' ಅಂತ ಹೇಳಿದ. ನಲ್ವತ್ತರ ಹತ್ತಿರದ ಇವ ಹತ್ತೊಂಬತ್ತು , ಇಪ್ಪತ್ತರ ಆಸುಪಾಸಿನ ಮಗಳು. ಯೆಂತ ಹೇಳುದು? ಶಂಕರ ಕಂಗಾಲಾದ. ದಿವ್ಯ ಸಾ 'ನಾನು ಮಾಧವನನ್ನೇ ಮದುವೆ ಆಗುದು' ಅಂತ ಹಟ ಹಿಡಿದ್ಲು. ಅಂತೂ ಮದುವೆ ಆಯ್ತು. ಮರುವರ್ಷದ ತಿರುಗಾಟದಲ್ಲಿ ಅವರಿಬ್ರೂ ಅಂಬೆ ಸಾಲ್ವ, ದಾಕ್ಷಾಯಣಿ ಶಿವ, ಊರ್ವಶಿ ಅರ್ಜುನ ಜೋಡಿಯಾಗಿ ಕಂಡಾಪಟ್ಟೆ ರೈಸಿದ್ರು.

ಎರಡು ವರ್ಷ ಹೀಗೇ ಕಳೀತು. ಆ ವರ್ಷ ಮೇಳಕ್ಕೆ ಒಬ್ಬ ಹೊಸ ಹುಡುಗ ಪುಂಡು ವೇಷಧಾರಿಯಾಗಿ ಬಂದ. ಅವನೇ ಕಿಶೋರ. ಅವ ಆಗ್ಲೇ ಫೇಮಸ್ ಆಗಿದ್ದ. ಬೇರೆ ಒಂದೆರಡು ಮೇಳದಲ್ಲಿ ಕುಣೀತಿದ್ದ. ಇಪ್ಪತ್ತೇಳು ಇಪ್ಪತ್ತೆಂಟರ ಆಸು ಪಾಸಿನ ಕೆಂಪು ಕೆಂಪು ಟೊಮೇಟೋದ ಹಾಗಿದ್ದ ಅವ ಮಾಧವ ಮಾಡ್ತಿದ್ದ ಪಾರ್ಟುಗಳನ್ನು ಮಾಡ್ಲಿಕ್ಕೆ ಸುರು ಮಾಡಿದ. ಇದರಿಂದಾಗಿ ಕೆಲವೇ ಸಮಯದಲ್ಲಿ ಕಿಶೋರ ದಿವ್ಯರ ಜೋಡಿ ಕಂಡಾಬಟ್ಟೆ ಫೇಮಸ್ ಆಯ್ತು. ಮಾಧವ ಈಗ ಭೀಷ್ಮ, ದಕ್ಷ, ಇಂದ್ರ ಇಂಥ ಪಾರ್ಟುಗಳಿಗೆ ಸೀಮಿತ ಆದ. ಸ್ಟೇಜಿನಲ್ಲಿ ಕಿಶೋರ ಅಗತ್ಯಕ್ಕಿಂತ ಹೆಚ್ಚು ದಿವ್ಯಳನ್ನು ಅರಂಟೆ ಹಿಡ್ಕೊಳ್ಳುದು ಕೆನ್ನೆ ಸವರುದು ಎಲ್ಲ ಮಾಡ್ತಿದ್ದ. ಮಾಧವನಿಗೆ ಇದನೆಲ್ಲ ನೋಡಿ ಮಂಡೆ ಹಾಳಾಯ್ತು. ದಿವ್ಯನ ಹತ್ರ, 'ನೀನು ಕಿಶೋರನ ಹತ್ರ ಹೆಚ್ಚು ಸಲುಗೆಯಿಂದ ಇರುದು ನಂಗೆ ಸ್ವಲ್ಪ ಸಾ ಇಷ್ಟ ಆಗೂದಿಲ್ಲ. ಸ್ವಲ್ಪ ಜಾಗ್ರತೆಯಿಂದ ಇರು' ಅಂತ ಹೇಳಿದ. ಅವಳು ಎಲ್ಲಿ ಕೇಳ್ತಾಳೆ? ಆ ಗರ್ವದಲ್ಲಿ ಮಾಧವ ಒಂದೆರಡು ಸರ್ತಿ ಯುದ್ಧದ ಸೀನಿನಲ್ಲಿ ಕಿಶೋರನಿಗೆ ಎರಡು ಬಾರಿಸಿದ್ದ. ಚೆಂಡೆಯ ಪೆಟ್ಟಿನಲ್ಲಿ ಅವ ಬಾರಿಸಿದ್ದು ಯಾರಿಗೂ ಗೊತ್ತಾಗ್ಲಿಲ್ಲ.

ಮರುವರ್ಷ ದಿವ್ಯ ಗರ್ಭಿಣಿ ಆದ್ಲು. ಹಾಗಾಗಿ ಮೇಳ ಬಿಡ್ಬೇಕಾಗಿ ಬಂತು. ಆದ್ರೆ ಅವಳ ಅದೃಷ್ಟ ಸರೀ ಇರ್ಲಿಲ್ಲ. ನಾಕು ತಿಂಗಳಾಗುವಾಗ ಗರ್ಭ ಜಾರಿತು. ಅವಳಿಗೆ ಕಂಡಾಬಟ್ಟೆ ಶಾಕ್ ಆಯಿತು. ಅದನ್ನೇ ಮಂಡೆಗೆ ಹಚ್ಚಿಕೊಂಡು ಒಂದು ನಮೂನೆ ಚಪ್ಪೆ ಆದ್ಲು. ಮಾಧವ ಒಂದಷ್ಟು ದಿವಸ ಅವಳಿಗೆ ಸಮಾಧಾನ ಮಾಡಿದ. 'ನನ್ನ ಒಡಲ ಸಂಕಟ ನಂಗೆ ಗೊತ್ತು. ನಿಮಿಗೆ ಯೆಂತ ಗೊತ್ತುಂಟು ಮಣ್ಣಾಂಗಟ್ಟಿ?' ಅಂತ ಅವಳು ಕೂಗಿ ಬೈದು ಎಲ್ಲ ಮಾಡಿದ್ಲು. ಪಾಪ ಮಾಧವ ಎಂತ ಮಾಡ್ತಾನೆ? ಎಷ್ಟೂಂತ ಸಮಾಧಾನ ಮಾಡ್ತಾನೆ? ಮೇಳದ ಯೆಜಮಾನ್ರು ಹೇಳಿ ಕಳಿಸಿದ್ರು ಅಂತ ತಿರುಗಾಟಕ್ಕೆ ಹೋದ.

ದಿವ್ಯ ಇಲ್ಲದೇ ಕಿಶೋರ ಡಲ್ ಆದ. ಹಾಗೂ ಹೀಗೂ ಆ ವರ್ಷದ ತಿರುಗಾಟ ಮುಗಿಸಿದವ ನಂತರ